ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 2, May-June 2025, Pp. 7-15
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕಲೆ ಮತ್ತು ಸಂಸ್ಕೃತಿ ಉಳಿಸುವಲ್ಲಿ ಹಿರಿಯೂರು ತಾಲೂಕಿನ ಭಜನೆ ಕಲಾವಿದರ ಪಾತ್ರ

**ರಂಗಸ್ವಾಮಿ ಎಸ್.ಜಿ**
ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

***Abstract:***
*ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಸೀಮೆ, ಪ್ರಾಂತ್ಯ ಅಥವಾ ತಾಲೂಕು ಐತಿಹಾಸಿಕವಾಗಿ ರಾಜಕೀಯವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬೆಳೆದು ಬಂದಿರುವುದು ಈ ನೆಲದ ವಿಶೇಷವಾದ ಗುಣವಾಗಿದೆ. ಕಲೆ, ಸಾಹಿತ್ಯ, ಸಂಗೀತ, ಹಾಗೂ ಜಾನಪದ ಸಂಪತ್ತು ಹೊಂದಿರುವ ಈ ತಾಲೂಕು ಜಾನಪದ ಸಂಸ್ಕೃತಿಯ ಸಿರಿವಂತಿಕೆಗೆ ಸಾಕ್ಷಿಯಾಗಿದೆ. ಗಣಿ, ಡಮರು, ತಮಟೆ ವಾದ್ಯ, ಚೌಡಿಕೆ ಪದ, ಉರುಮೆ, ಲಾವಣಿ, ಕೋಲಾಟ ಪದ, ಸೋಬಾನೆ, ದೇವರ ನಾಮ, ಉಯ್ಯಾಲೆ ಪದ, ಬೀಸುವ ಕಲ್ಲಿನ ಪದ, ರಾಗಿ ಬೀಸುವಾಗ ಭತ್ತ ಕುಟ್ಟುವಾಗ ಹಾಡುವ ಹಾಡುಗಳು, ಗೊರವನ ಕುಣಿತ, ವೀರಗಾಸೆ, ಭಜನೆ ಪದಗಳು, ಜನಪದ ಕಲೆಯ ಅನಾವರಣಕ್ಕೆ ಸ್ಫೂರ್ತಿಯಾಗಿವೆ. ಈ ಹಿನ್ನೆಲೆಯಲ್ಲಿ ಕಲೆ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸುವಲ್ಲಿ ಭಜನೆ ಕಲಾವಿದರು ವಹಿಸುವ ಪಾತ್ರವನ್ನು ಕುರಿತು ಅಧ್ಯಯನ ಮಾಡಲಾಗಿದೆ.*

***Keywords:*** *ಜಾನಪದ ಸಂಸ್ಕೃತಿ, ಹಿರಿಯೂರು, ಕಲೆ, ಸಂಸ್ಕೃತಿ, ಭಜನೆ ಪದಗಳು, ಜನಪದ.*

## ಪೀಠಿಕೆ

ಚಿತ್ರದುರ್ಗದ ಪಾಳೆಗಾರರ ಇತಿಹಾಸ, ಮುರುಘಾ ಮಠದ ಸಾಂಸ್ಕೃತಿಕ ಪರಂಪರೆ, ಸಿರಿಗೆರೆ ಮಠದ ಸಾಂಸ್ಕೃತಿಕ ಪರಂಪರೆ, ಶ್ರೀ ಏಕನಾಥೇಶ್ವರಿ, ಉಚ್ಚಂಗಿ ಯಲ್ಲಮ್ಮ, ಚಿತ್ರ ದೇವರು, ಎತ್ತಪ್ಪ, ಜುಂಜಪ್ಪ, ಕಾಟಲಿಂಗೇಶ್ವರ, ಮೈಲಾರ ಲಿಂಗಪರಂಪರೆ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಗೌರಸಂದ್ರ ಮಾರಮ್ಮ, ಗಾದ್ರಿ ಪಾಲನಾಯಕ, ಗಲ್ಲೆದೇವರು, ಈ ಬಗೆಯ ಸಾಂಸ್ಕೃತಿಕ ಐತಿಹಾಸಿಕ, ಧಾರ್ಮಿಕ ವೀರರನ್ನು ಕುರಿತ ಕಥೆ, ಕುಣಿತಗಳ ಮೂಲಕ ಈ ಭಾಗದ ಜನಪದ ಕಲಾವಿದರು ತೋರಿದ ಆದರ್ಶ ಅನನ್ಯವಾದುದು ಮತ್ತು ಅಪಾರವಾದುದು.

ಚಿತ್ರದುರ್ಗ ಜಿಲ್ಲೆ ಕನ್ನಡನಾಡು–ನುಡಿಗೆ, ಸಾಹಿತ್ಯ, ಸಂಗೀತ, ಸಿನಿಮಾ ರಂಗಕಲೆಗೆ ತನ್ನದೇ ಆದ ಕೊಡುಗೆ ನೀಡುತ್ತಾ ಬಂದಿದೆ. ಹಾಗೆಯೇ ಹಿರಿಯೂರು ತಾಲೂಕು ಕನ್ನಡ ಸಾಹಿತ್ಯ, ಸಂಗೀತ, ರಂಗಕಲೆ ಹಾಗೂ ಜನಪದ ಕ್ಷೇತ್ರಕ್ಕೆ ಪ್ರಸಿದ್ಧಿ ಪಡೆದಿದೆ. ಕವಿ ಬಬ್ಬೂರು ರಂಗ, ಜನಪದ ಕಲಾವಿದೆ ಬಿದರಕೆರೆ ತೋಪಜ್ಜಿ, ಸಕ್ಕರದ ನಿಂಗಜ್ಜಿ ಹಾಗೂ ಸೋಬಾನೆ, ಬೀಸುವ ಕಲ್ಲಿನ ಪದದ ಕಲಾವಿದರು, ಚೌಡಕಿ ಕಲಾವಿದರು, ಭಜನೆ ಕಲಾವಿದರು, ಗೊರವನ ಕುಣಿತ, ಕಂಸಾಳೆ, ತಮಟೆ ವಾದ್ಯ, ತತ್ವಪದ ಗಾಯಕರು, ವೃತ್ತಿ ಮತ್ತು ಹವ್ಯಾಸಿಗಳು ನೆಲೆಸಿ ಕನ್ನಡ ನಾಡಿಗೆ ಸಾಂಸ್ಕೃತಿಕ ಅಸ್ಮಿತೆಯನ್ನು ಉಳಿಸಿ ಬೆಳೆಸಿ ಬಹಳಷ್ಟು ಕೊಡುಗೆ ನೀಡಿದ ಊರು ಹಿರಿಯೂರು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅದರಲ್ಲಿ ಭಜನಾ ಕಲಾವಿದರ ಪಾತ್ರವನ್ನು ಇಲ್ಲಿ ನೋಡಬಹುದಾಗಿದೆ.

***Please cite this article as:*** ರಂಗಸ್ವಾಮಿ ಎಸ್.ಜಿ. (2025). ಕಲೆ ಮತ್ತು ಸಂಸ್ಕೃತಿ ಉಳಿಸುವಲ್ಲಿ ಹಿರಿಯೂರು ತಾಲೂಕಿನ ಭಜನೆ ಕಲಾವಿದರ ಪಾತ್ರ, *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(2), 7–15

ಪ್ರಸ್ತುತ ಅಧ್ಯಯನವು ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲೂಕಿಗೆ ಸಂಬಂಧಿಸಿದೆ. 2011ರ ಜನಗಣತಿಯ ಪ್ರಕಾರ ಚಿತ್ರದುರ್ಗ ಜಿಲ್ಲೆಯ ಜನಸಂಖ್ಯೆ 16,59,456 ಹೊಂದಿದ್ದು, 8,436 ಚದರ ಕಿಲೋಮೀಟರ್ ವಿಸ್ತೀರ್ಣ ಹೊಂದಿದೆ. ಇದರಲ್ಲಿ 8,40,843 ಪುರುಷರು, 8,18,613 ಮಹಿಳೆಯರು ಇದ್ದಾರೆ. 22 ಹೋಬಳಿಗಳನ್ನು ಹೊಂದಿದ್ದು, 6 ತಾಲೂಕುಗಳನ್ನು ಹೊಂದಿದೆ. ಇದರಲ್ಲಿ ಹಿರಿಯೂರು ಪ್ರಸ್ತುತ ಅಧ್ಯಯನ ಕ್ಷೇತ್ರವಾಗಿದ್ದು, ಇದು ಐತಿಹಾಸಿಕ, ಸಾಮಾಜಿಕ ಮತ್ತು ಭೌಗೋಳಿಕ ಹಿನ್ನಲೆಯನ್ನು ಹೊಂದೆ. ಪ್ರಸ್ತುತ 2011ರ ಜನಗಣತಿಯ ಪ್ರಕಾರ ಹಿರಿಯೂರು ತಾಲೂಕು 1,703 ಚದರ ಕಿಲೋಮೀಟರ್ ಹೊಂದಿದ್ದು, 168 ಜನ ಸಾಂದ್ರತೆಯನ್ನು ಹೊಂದಿದೆ. ಹಾಗೆ 1,44,160 ಪುರುಷರು, 1,41,973 ಮಹಿಳೆಯರುನ್ನು ಒಳಗೊಂಡಿದೆ.

**ಹಿರಿಯೂರು ಊರಿನ ಸ್ಥಾಪನೆ**

ಚಿತ್ರದುರ್ಗ ಜಿಲ್ಲೆಯಲ್ಲಿ ಹಿರಿಯೂರು ತನ್ನದೇ ಆದ ಸ್ಥಾನವನ್ನು ಹೊಂದಿದೆ. ಹದಿನಾರನೆಯ ಶತಮಾನದ ಆರಂಭದಲ್ಲಿ ಮಾಯಸಂದ್ರದ ದೊರೆ ಕೇಶವ ನಾಯಕನು ಹಿರಿಯೂರನ್ನು ಸ್ಥಾಪಿಸಿದನು. ಹಿರಿಯೂರಿನ ಸ್ಥಾಪನೆಯ ಬಗ್ಗೆ ಒಂದು ಜಾನಪದ ಕಥೆಯಿದೆ. ಮೊಲವು ಬೇಟೆಯ ನಾಯಕನನ್ನು ಅಟ್ಟಿಸಿಕೊಂಡು ಹೋದ ಸ್ಥಳವೆಂಬ ಪ್ರತೀತಿಯಿದೆ. ಹಿರಯೂರು ವೇದಾವತಿ ನದಿ ತೀರದಲ್ಲಿದ್ದು, ನೀರಿನ ಅನುಕೂಲತೆ ಇರುವುದರಿಂದ ಈ ಊರು ಬೆಳೆಯ ತೊಡಗಿತು, ಹಳ್ಳಿ ಹಳ್ಳಿಗಳಿಂದ ಜನರು ಬಂದು ನೆಲಸ ತೊಡಗಿದರು. ಇದರಿಂದ ಹಿರಿಯೂರು ಪಟ್ಟಣವಾಗಿ ಬೆಳೆಯತೊಡಗಿತು. ಶ್ರೀ ತೇರುಮಲ್ಲೇಶ್ವರ ಸ್ವಾಮಿಯು ನೆಲೆಸಿದ ಪಾವನ ಕ್ಷೇತ್ರವಾಗಿದೆ.

**ಹಿರಿಯೂರು ಊರಿನ ಹಿನ್ನಲೆ**

ಬಹು ದಿನಗಳ ಹಿಂದೆ ಹಿರಿಯೂರಿಗೆ 'ಘನಪುರಿ' ಎಂಬ ಹೆಸರಿತ್ತು. ಇದಕ್ಕೆ ಪ್ರಮಾಣವಾಗಿ ಹಿರಿಯೂರನ್ನು ಹಿರಿಯೂರಿನ ಕವಿ ಬಬ್ಬೂರು ರಂಗನು ತನ್ನ ಕಾವ್ಯದಲ್ಲಿ ಘನಪುರಿ ಎಂಬ ಪದವನ್ನು ಉಲ್ಲೇಖಿಸಿದ್ದು, ಬಹುಶಃ ಹಿರಿಯೂರಿನ ಹಿಂದಿನ ಹೆಸರು ಘನಪುರಿ ಎಂದಿರಬಹುದು. ಘನಪುರಿ ಎಂದರೆ ಹೆಸರಾದ ಊರು ಎಂದರ್ಥ. 1721 ರಲ್ಲಿ ಹಿರೇಮದಕರಿನಾಯಕನ ಕಾಲದಲ್ಲಿ 'ಹಿರಿಯೂರು' ಧರೆಯೊಳು ಹೆಸರಾದ ಊರಾಗಿತ್ತು. ಘನಪುರಿ ಎಂಬ ಹೆಸರು ಕಾಲಾಂತರದಲ್ಲಿ ಬದಲಾಗಿ 'ಹೊನ್ನ ಹಿರಿಯೂರು' ಎಂಬ ಹೆಸರು ಬಳಕೆಗೆ ಬಂತು. ಆಗಿನ ಕಾಲದಲ್ಲಿ ಹಿರಿಯೂರು ಸುತ್ತಮುತ್ತಲಿನ ಪ್ರದೇಶದಲ್ಲಿ ನೆಲವನ್ನು ಅಗೆದರೆ ಹೊನ್ನು ಸಿಗುತ್ತಿತ್ತಂತೆ ಆ ಕಾರಣ ಈ ಊರನ್ನು 'ಹೊನ್ನ ಹಿರಿಯೂರು' ಎಂದು ಕೂಡ ಕರೆದಿದ್ದಾರೆ. ನಂತರದ ದಿನಗಳಲ್ಲಿ 'ಹೊನ್ನ' ಹೋಗಿ ಹಿರಿಯೂರು ಪಟ್ಟಣವಾಗಿ ಬೆಳೆದು ನಿಂತಿದೆ.

**ಅಧ್ಯಯನದ ಪ್ರಾಕಲ್ಪನೆ**

- ಭಜನಾ ಕಲಾವಿದರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಹಿಂದುಳಿದಿದೆ.
- ಕಲೆ ಮತ್ತು ಸಂಸ್ಕೃತಿಯನ್ನು ಉಳಿಸುವಲ್ಲಿ ಭಜನಾ ಕಲಾವಿದರ ಪಾತ್ರ ವಹಿಸುತ್ತದೆ.
- ಭಜನಾ ಕಲಾವಿದರು ತಮ್ಮ ಸಮಸ್ಯೆ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತಾರೆ.
- ಭಜನಾ ಕಲಾವಿದರಿಗೆ ಸರಿಯಾದ ಸೌಲಭ್ಯಗಳಿಲ್ಲ.

**ಅಧ್ಯಯನದ ಉದ್ದೇಶಗಳು**

- ಭಜನಾ ಕಲಾವಿದರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವುದು.
- ಕಲೆ ಮತ್ತು ಸಂಸ್ಕೃತಿಯನ್ನು ಉಳಿಸುವಲ್ಲಿ ಭಜನಾ ಕಲಾವಿದರ ಪಾತ್ರವನ್ನು ಅಧ್ಯಯನ ಮಾಡುವುದು.
- ಭಜನಾ ಕಲಾವಿದರಿಗಿರುವ ಸೌಲಭ್ಯಗಳನ್ನು ಅಧ್ಯಯನ ಮಾಡುವುದು.

**ಅಧ್ಯಯನದ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಿಕೊಳ್ಳಲಾಗಿದೆ. ಪ್ರಾಥಮಿಕ ಮಾಹಿತಿಯ ಸಂಗ್ರಹಣೆಗೆ ಸಂದರ್ಶನ, ಅವಲೋಕನ, ಗುಂಪುಚರ್ಚೆ, ಪ್ರಕರಣ ಅಧ್ಯಯನ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ. ಇದಲ್ಲದೆ ಭಜನಾ ಕಲಾವಿದರನ್ನು ನೇರವಾಗಿ ಬೇಟಿ ನೀಡಿ ರಚಿತ ಸಂದರ್ಶನ ಕೈಪಿಡಿಯ ಮುಖಾಂತರ ಮಾಹಿತಿ ಸಂಗ್ರಹಿಸಿಕೊಳ್ಳಲಾಗಿದೆ. ಮಾಧ್ಯಮಿಕ ಮಾಹಿತಿಯನ್ನು ವಿವಿಧ ಗ್ರಂಥಗಳು, ಪತ್ರಿಕಾ ವರದಿ, ಲೇಖನಗಳು, ವರದಿಗಳು ಮುಂತಾದ ಮೂಲಗಳಿಂದ ಸಂಗ್ರಹಿಸಿಕೊಳ್ಳಲಾಗಿದೆ.

**ಭಜನೆ ಕಲಾವಿದರು**

ಹಿರಿಯೂರು ತಾಲೂಕಿನ ಪ್ರತಿಯೊಂದು ಹಳ್ಳಿಗಳಲ್ಲೂ ಭಜನೆ ಕಲಾವಿದರು ಇದ್ದಾರೆ, ಇವರು ತತ್ವಪದಗಳನ್ನು ಹಾಡುತ್ತಾರೆ. ಮಹಾಭಾರತದ ಶ್ರೀ ಕೃಷ್ಣ ದೇವರನ್ನು ಕುರಿತಾದ ಹಾಡುಗಳು, ಪುರಂದರ ದಾಸರು, ಕನಕದಾಸದರ ಕೀರ್ತನೆಗಳು, ಶಿವಪಾರ್ವತಿ ಕುರಿತ ಹಾಡುಗಳು, ಸಂತ ಶಿಶುನಾಳ ಷರೀಫರ ಹಾಡುಗಳು, ದೇವಿ ಮಹಾತ್ಮೆಯ ಸ್ತುತಿಗಳು, ಗ್ರಾಮ ದೇವತೆ ಕುರಿತ ಗೀತೆಗಳು, ಪಾಂಡುರಂಗ ವಿಠಲನ ಕುರಿತ ಗೀತೆಗಳು, ಭಜನೆ ಪದಗಳು, ಎತ್ತಪ್ಪ, ಜುಂಜಪ್ಪ, ಭೂತಪ್ಪ, ಚಿತ್ರದೇವರು, ಮೈಲಾರಲಿಂಗ, ಆಂಜನೇಯ, ಪಾತೇ ದೇವರು, ವದ್ದೀಕೆರೆ ಸಿದ್ದೇಶನ ಕುರಿತ ಗೀತೆಗಳು, ಯರಗುಂಟೇಶ್ವರ ಸ್ವಾಮಿ ಕುರಿತ ಗೀತೆಗಳು, ಕರಿಯಮ್ಮ, ಮಾರಮ್ಮ, ಗೌರಸಂದ್ರ ಮಾರಮ್ಮ ಕುರಿತ ಗೀತೆಗಳು, ಶಾಂತವೀರಮಹಾಸ್ವಾಮಿ ಕುರಿತ ಗೀತೆಗಳು, ನಾಯಕನಹಟ್ಟಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಕುರಿತ ಗೀತೆಗಳು, ಕೊಳಾಳ್ ಕೆಂಚಾವಧೂತರ ಕುರಿತ ಗೀತೆಗಳು, ವೇಣುಗೋಪಾಲಸ್ವಾಮಿ ಕುರಿತ ಭಜನಾ ಪದಗಳನ್ನು ಹಾಡುತ್ತಾರೆ.

**ಭಜನಾ ಕಲಾವಿದರ ವಿಶೇಷತೆ**

ಭಜನೆ ಕಲಾವಿದರು ಸಾಮಾನ್ಯವಾಗಿ ಹಬ್ಬ, ಜಾತ್ರೆ, ಹರಿದಿನ, ವಿಶೇಷ ದಿನಗಳಲ್ಲಿ ಭಜನೆ ಪದಗಳನ್ನು ಹಾಡಿ ಸಂತೋಷ ಪಡುತ್ತಾರೆ. ಹಬ್ಬ, ನಾಮಕರಣ, ಸಾವು, ನೋವು, ತಿಥಿ ಮುಂತಾದ ಕಾರ್ಯಗಳಲ್ಲಿ ಭಜನೆ ಪದಗಳನ್ನು ಹಾಡಿ ಬೇರೆಯನ್ನು ಸಂತೋಷ ಪಡಿಸುತ್ತಾರೆ. ತನ್ನಲ್ಲಿ ನೋವು ಸಂಕಟ, ವೇದನೆ ಇದ್ದರೂ ಬೇರೆಯವರಲ್ಲಿ ಅದನ್ನು ಹೇಳದೆ ತನ್ನಲ್ಲಿ ನೋವು ನುಂಗುವ ಮೂಲಕ ಬೇರೆಯವರನ್ನು ಸಂತೋಷ ಪಡಿಸುವ ಕಾಯಕವನ್ನು ಭಜನೆ ಕಲಾವಿದರು ಮಾಡುತ್ತಾ ಬಂದಿರುವುದು ಜಾನಪದ ಸಂಸ್ಕೃತಿಯ ವಿಶೇಷ ಗುಣವಾಗಿದೆ.

**ಭಜನೆ ಪದಗಳ ಉಪಯೋಗ ಅಥವಾ ಪ್ರಾಮುಖ್ಯತೆ**

ಭಜನೆ ಪದಗಳಿಂದ ಧರ್ಮಾತೀತ ಭಾವನೆ, ಕೋಮು ಸೌಹಾರ್ಧತೆ, ಭಾವೈಕ್ಯತೆ, ಐಕ್ಯತೆ, ಹೊಂದಾಣಿಕೆ, ಬೆಸುಗೆ, ರೀತಿ–ನೀತಿ, ಮನುಷ್ಯನ ವರ್ತನೆ ಬದಲಾವಣೆ, ಸೌಹಾರ್ಧತೆ ತಂದು ಎಲ್ಲರಲ್ಲೂ ಬೇರೆಯುವ ಮತ್ತು ಬೆಸೆಯುವ ದೈವಭಕ್ತಿ, ಭಕ್ತಿ ಭಾವ, ಗುಣವನ್ನು ತಂದು ಕೊಡುತ್ತವೆ. ಹಾಗೂ ಎಲ್ಲರನ್ನೂ ಒಂದುಗೂಡಿಸುತ್ತವೆ.

**ಭಜನೆ ಕಲಾವಿದರ ಸಮಸ್ಯೆಗಳು**

ಭಜನಾ ಕಲಾವಿದರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವುಗಳು ಕೆಳಗಿನಂತಿವೆ. ಬಡತನ, ಹಣಕಾಸಿನ ಸಮಸ್ಯೆ, ವಸತಿ ಸಮಸ್ಯೆ, ಭಜನೆ ಕಲಾವಿದರ ಸಂಘ ಸಂಸ್ಥೆಗಳ ಕೊರತೆ, ಉತ್ತಮ ಕಲಾವಿದರ ಮಾರ್ಗದರ್ಶನದ ಕೊರತೆ, ಮಾದಕ ವ್ಯಸನ, ಸರ್ಕಾರದ ಸೌಲಭ್ಯದ ಕೊರತೆ ಹೀಗೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವುಗಳಲ್ಲದೆ ಮಾಶಾಸನ ಸಮಸ್ಯೆ, ವಾದ್ಯ ಪರಿಕರಗಳ ಸಮಸ್ಯೆ. ಈ ರೀತಿಯಾಗಿ ಭಜನಾ

ಕಲಾವಿದರು ಪ್ರಸ್ತುತ ದಿನಗಳಲ್ಲಿ ಸಮಸ್ಯೆಗಳನ್ನು ಕೂಡ ಎದುರಿಸುತ್ತಿದ್ದಾರೆ.

**ಭಜನಾ ಕಲಾವಿದರ ಸಮಸ್ಯೆಗೆ ಪರಿಹಾರೋಪಾಯಗಳು**

ಭಜನೆ ಕಲಾವಿದರು ಆರೋಗ್ಯದ ಕಡೆ ಗಮನಹರಿಸಬೇಕು, ಮಾದಕ ವ್ಯಸನ ಮತ್ತು ಕುಡಿತದಿಂದ ದೂರವಿರಬೇಕು, ನೆರೆಹೊರೆ, ಸಮಾಜಕ್ಕೆ ಗೌರವ ತರುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು, ಉತ್ತಮ ಹಿರಿಯ ಕಲಾವಿದರ ಮಾರ್ಗದರ್ಶನ ಪಡೆಯಬೇಕು, ಸರ್ಕಾರ ಭಜನಾ ಕಲಾವಿದರಿಗೆ ವಾದ್ಯ ಪರಿಕರ ನೀಡಬೇಕು, ಸರ್ಕಾರವು ಸರ್ಕಾರದ ಕಾರ್ಯಕ್ರಮಗಳಲ್ಲಿ ಭಜನಾ ಕಲಾವಿದರನ್ನು ಗುರುತಿಸಿ ಗೌರವಿಸಬೇಕು, ಭಜನಾ ಕಲಾವಿದರಿಗೆ ಜೀವನ ಭತ್ಯೆ ಹಾಗೂ ಭದ್ರತೆ ನೀಡಬೇಕು, ಭಜನಾ ಕಲಾವಿದರಿಗೆ ಮಾಸಾಶನ ನೀಡಬೇಕು.

**ಹಿರಿಯೂರು ತಾಲೂಕಿನ ಭಜನಾ ಮಂಡಳಿಗಳ ವಿವರ**

**ಶ್ರೀ ಸತ್ಯಸಾಯಿ ಭಜನಾ ಮಂಡಳಿ, ಹಿರಿಯೂರು.**

ಎಂ.ಬಿ.ಲಿಂಗಪ್ಪ, ಜೆ.ನಿಜಲಿಂಗಪ್ಪ, ಚಂದ್ರಪ್ಪ, ರಾಘವೇಂದ್ರ, ಎ.ನಾಗೇಶ್, ರುಕ್ಮಿಣಿ, ಸತ್ಯಭಾಮ, ಮಂಜುಳ, ಲಕ್ಷ್ಮಿ, ಶಾಂತಮ್ಮ, ಜಗದೀಶ್, ಲೀಲಾವತಿ, ವೀಣಾ, ವಿನೋದಮ್ಮ, ಕೃಷ್ಣಯ್ಯ ಶ್ರೇಷ್ಠಿ, ರಾಮಪ್ಪ, ಶ್ರೀನಿವಾಸಶ್ರೇಷ್ಠಿ, ನಾಗೇಂದ್ರಬಾಬು, ಅಂಕಮ್ಮ, ಮಂಜುಳ, ಕಮಲಮ್ಮ, ಈ ಕಲಾವಿದರು ಪ್ರತಿ ಗುರುವಾರ ಸಾಯಿಬಾಬನನ್ನು ಕುರಿತು ಭಜನಾ ಗೀತೆಗಳನ್ನು ಹಾಡುತ್ತಾ ಬಂದಿದ್ದಾರೆ. ಇವರು 30 ವರ್ಷಗಳಿಂದ ಕಲೆಯ ಸಂರಕ್ಷಣೆಯಲ್ಲಿ ತೊಡಗಿದ್ದಾರೆ.

**ಶ್ರೀ ಕನ್ನಿಕ ಭಜನಾ ಮಂಡಳಿ, ಹಿರಿಯೂರು.**

ಎನ್.ರುಕ್ಮಿಣಿ, ಕಲಾ.ಪಿ., ರುಕ್ಮಿಣಿ.ಆರ್. ಲತಾ.ಕೆ.ಎಂ., ವಿನೋದ, ಗಜಲಕ್ಷ್ಮಿ, ರತ್ನಮ್ಮ, ವಿಜಯಲಕ್ಷ್ಮಿ, ಭುವನೇಶ್ವರಿ, ಕೃಷ್ಣವೇಣಿ, ಲಕ್ಷ್ಮಿ, ಸತ್ಯಭಾಮ ಇವರು 30 ವರ್ಷಗಳಿಂದ ಕಲೆಯ ಉಳುವಿಗೆ ಶ್ರಮಿಸಿದ್ದಾರೆ.

**ಶ್ರೀ ಅಂಜನಾದ್ರಿ ಭಜನಾ ಮಂಡಳಿ, ಹಿರಿಯೂರು.**

ಟಿ.ಸುಲೋಚನ, ಸರೋಜಮ್ಮ, ಮಮತಾ, ಲತಾ, ಲತಾ, ಮಮತ, ಲತಾ, ವಸುದಾ, ಮೇಘ, ಸರೋಜಮ್ಮ, ಭಾಗ್ಯ, ರೇಖಾ, ರಾಧಿಕ ಇವರು 30 ವರ್ಷಗಳಿಂದ ಕಲೆಯ ಉಳಿವಿಗೆ ಶ್ರಮಿಸಿದ್ದಾರೆ.

**ಶ್ರೀ ಪಾಂಡುರಂಗ ಭಜನಾ ಮಂಡಳಿ, ಮ್ಯಾಕ್ಲೂರಹಳ್ಳಿ.**

ದೇವರಾಜು ಈರಣ್ಣ, ಎನ್.ರಂಗಸ್ವಾಮಿ, ವೈ.ರಂಗಯ್ಯ, ಕೆ.ರಾಜಣ್ಣ, ಎನ್.ಮಹಾಲಿಂಗಪ್ಪ, ಎನ್.ರಂಗಸ್ವಾಮಿ, ಆರ್.ನಾಗರಾಜು, ಚಂದ್ರಹಾಸ, ಮೂಡಲ ಗಿರಿಯಪ್ಪ, ಬಿ.ಈರಣ್ಣ, ಖಾಜಿ ವೀರಯ್ಯ, ಈರಣ್ಣ, ವೀರಯ್ಯ, ಕರಿಯಜ್ಜ, ನಾಗಜ್ಜ, ಪಿ.ಚಿತ್ತಯ್ಯ, ರಂಗಸ್ವಾಮಿ ಮ್ಯಾಕ್ಲೂರಹಳ್ಳಿಯ ಭಜನಾ ಕಲಾವಿದರು ಎರಡು ತಲೆಮಾರುಗಳಿಂದ ಭಜನೆ ಮಾಡುತ್ತಾ ಬಂದಿದ್ದಾರೆ.

**ಶ್ರೀ ಕೃಷ್ಣ ಭಜನಾ ಮಂಡಳಿ, ವೇದಾವತಿನಗರ, ಹಿರಿಯೂರು.**

ಜೆ.ನಿಜಲಿಂಗಪ್ಪ, ಶಿವಲಿಂಗಪ್ಪ.ಎನ್, ಕಾಂತರಾಜು, ರುದ್ರಯ್ಯ, ಜಿ.ಶ್ರೀನಿವಾಸ, ಪಾಂಡುರಂಗಪ್ಪ, ದಿವಾಕರ್, ತಿಮ್ಮಣ್ಣ, ಕೃಷ್ಣಪ್ಪ, ಮಹಾಲಿಂಗಪ್ಪ, ಕರಿಯಪ್ಪ, ಕೃಷ್ಣ, ಸೀನಪ್ಪ ಇನ್ನೂ ಮುಂತಾದ ಕಲಾವಿದರು ಪ್ರತಿ ಶನಿವಾರ ಸಂಜೆ 7 ಘಂಟೆಗೆ ಹಿರಿಯೂರಿನ ವೇದಾವತಿನಗರದ ಶ್ರೀ ಕೃಷ್ಣನ ದೇವಸ್ಥಾನ ಆವರಣದಲ್ಲಿ ಶ್ರೀ ಕೃಷ್ಣ ದೇವರು, ಪುರಂದರದಾಸರು, ಕನಕದಾಸರು, ಶಿವಪಾರ್ವತಿ, ಶಿಶುನಾಳ ಷರೀಫ, ಶ್ರೀದೇವಿ ಸ್ತುತಿ ಕುರಿತ ಕೀರ್ತನೆ, ದಾಸರ ಪದಗಳು, ದೇವರ ನಾಮಗಳನ್ನು ಭಜನಾ ಗೀತೆಗಳನ್ನಾಗಿ ಹಾಡುತ್ತಾರೆ. ಇವರು ಸುಮಾರು 6 ವರ್ಷಗಳಿಂದ ಭಜನೆ ಮಾಡುತ್ತಾ ಬಂದಿದ್ದಾರೆ.

**ಕಾಟಮಲಿಂಗೇಶ್ವರ ಭಜನಾ ಮಂಡಳಿ, ಯರಬಳ್ಳಿ. ಕಾಟಪ್ಪನಹಟ್ಟಿ.**

ಲವ, ರುದ್ರಮುನಿ, ದೊಡ್ಡತಿಮ್ಮಯ್ಯ, ಜೆ.ನಿಜಲಿಂಗಪ್ಪ, ಸಿ.ಶಿವಲಿಂಗಪ್ಪ, ಕಾಟಪ್ಪ, ಶಿವಾನಂದ್ ಇನ್ನು ಮುಂತಾದ ಭಜನಾ ಕಲಾವಿದರು ಸುಮಾರು 30 ವರ್ಷಗಳಿಂದ ಶಿವನನ್ನು ಕುರಿತ ಹಾಡುಗಳ ಹೇಳುತ್ತಾ ಪ್ರತಿ ಶನಿವಾರದಂದು ಭಜನಾ ಗೀತೆಗಳನ್ನು ಹಾಡಿ ಭಕ್ತಿಯಿಂದ ದೇವರನ್ನು ನೆನೆಯುತ್ತಾರೆ.

**ಭೂತಪ್ಪ ಸ್ವಾಮಿ ಭಜನಾ ಮಂಡಳಿ, ಮಾರನೇಹಳ್ಳಿ.**

ಬಿ.ನಾಗಪ್ಪ, ತಿಮ್ಮಜ್ಜ, ದ್ಯಾವರಪ್ಪ, ವಿ.ನಿಂಗಣ್ಣ, ಸಿ.ನಾಗಣ್ಣ, ಗೋವಿಂದಪ್ಪ, ಮೂರ್ತಪ್ಪ, ಚಿಕ್ಕಣ್ಣ, ಪಾತಲಿಂಗಪ್ಪ, ಜೆ.ನಿಂಗಣ್ಣ, ದಾಸಣ್ಣ ಇವರು ಪ್ರತಿ ಶನಿವಾರ ಭಜನಾ ಪದಗಳನ್ನು ಹಾಡುತ್ತಾ ಕಲೆ ಮತ್ತು ಸಂಸ್ಕೃತಿ ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾ ಬಂದಿದ್ದಾರೆ.

**ಶ್ರೀ ಪಾಂಡುರಂಗ ಭಜನಾ ಮಂಡಳಿ, ಅಂಬಲಗೆರೆ.**

ಕರಿಸ್ವಾಮಿ, ಕೆ.ರಂಗಸ್ವಾಮಿ (ಪೋಸ್ಟ್‌ಮ್ಯಾನ್), ಎಸ್.ಚಿದಾನಂದಪ್ಪ, ಜಿ.ವೆಂಕಟ ರಾಮಪ್ಪ, ಎಂ.ರಂಗಸ್ವಾಮಿ, ಟ್ಯೆಲರ್ ಕೆಂಚಪ್ಪ, ಡಿ.ಕೆಂಚಪ್ಪ, ಮಹಾಂತೇಶಪ್ಪ, ಈರಪ್ಪ, ವಿಜಯಮ್ಮ, ವೃಂದಮ್ಮ ಈಕಲಾವಿದರು ವಿಶೇಷವಾಗಿ ಅಂಬಲಗೆರೆ ಶ್ರೀ ರಂಗನಾಥಸ್ವಾಮಿ ಬೆಳದು ಬಂದ ಬಗೆ. ಆಂಜನೇಯಸ್ವಾಮಿ ಕುರಿತ ಭಜನಾ ಪದಗಳನ್ನು ಸುಮಾರು 25 ವರ್ಷಗಳಿಂದ ಹಾಡುತ್ತಾ ಬಂದಿದ್ದಾರೆ.

**ಶ್ರೀ ಪಾಂಡುರಂಗ ಭಜನಾ ಮಂಡಳಿ, ಆಲಮರದಹಟ್ಟಿ**

ಕೆಂಜೆಡಿಯಪ್ಪ, ಈರಣ್ಣ, ಚಿತ್ರಲಿಂಗಪ್ಪ, ಕುಮಾರ, ವೆಂಕಟೇಶ್, ತಿಮ್ಮಯ್ಯ, ಪಾಲಾಕ್ಷಪ್ಪ, ನಾಗರಾಜಪ್ಪ, ರಂಗನಾಥಪ್ಪ, ಈರಪ್ಪ, ಸಣ್ಣೀರಪ್ಪ, ತಿಪ್ಪೇಸ್ವಾಮಿ, ವೆಂಕಟಪ್ಪ, ಇನ್ನು ಮುಂತಾದ ಕಲಾವಿದರು ಭಜನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ.

**ಶ್ರೀ ಆಂಜನೇಯ ಭಜನಾ ಮಂಡಳಿ, ಗೂಡನೂರನಹಳ್ಳಿ.**

ಚಂದ್ರಶೇಖರಪ್ಪ, ಪಾತಲಿಂಗಪ್ಪ, ತಿಮ್ಮಣ್ಣ, ರಾಮಲಿಂಗಪ್ಪ, ಮಲ್ಲಯ್ಯ, ರೇವಣ್ಣ, ನಾರಾಯಣಪ್ಪ, ಮಹಲಿಂಗಪ್ಪ, ಇನ್ನು ಮುಂತಾದ ಕಲಾವಿದರು ಇಲ್ಲಿನ ಆಂಜನೇಯಸ್ವಾಮಿ, ಕರಿಯಮ್ಮದೇವಿ, ಶಿವಪರಮಾತ್ಮನನ್ನು ಕುರಿತ ಭಜನಾ ಗೀತೆಗಳನ್ನು ಹಾಡುತಾ ಬಂದಿದ್ದಾರೆ. ಇವರು ಸುಮಾರು 10 ವರ್ಷ ಗಳಿಂದ ಭಜನೆ ಮಾಡುತ್ತಾ ಬಂದಿದ್ದಾರೆ.

**ಪಾರ್ಥಲಿಂಗ ಭಜನಾ ಮಂಡಳಿ, ಶಿವಗಂಗ.**

ಪಾತೇಗೌಡ, ಓಂಕಾರಪ್ಪ, ತಿಪ್ಪೇಸ್ವಾಮಿ, ಕುಮಾರ, ಕೆಂಚಪ್ಪ, ಶ್ರೀನಿವಾಸ, ಮಹಲಿಂಗಪ್ಪ ಇಲ್ಲಿನ ಭಜನಾ ಕಲಾವಿದರು. ಪಾತೇದೇವರು, ಶ್ರೀ ಕೃಷ್ಣ, ರಾಧೆ, ರುಕ್ಮಿಣಿ ಹಾಗೂ ಶಿವನನ್ನು ಕುರಿತ ಭಜನಾ ಸ್ತುತಿಗಳನ್ನು ಹಾಡುತ್ತಾ ಬಂದಿದ್ದಾರೆ. ಇವರು ಸುಮಾರು 20 ವರ್ಷಗಳಿಂದ ಭಜನೆ ಮಾಡುತ್ತಾ ಬಂದಿದ್ದಾರೆ.

**ಶ್ರೀ ಕೃಷ್ಣ ಭಜನಾ ಮಂಡಳಿ, ಮಲ್ಲರಸನಹಟ್ಟಿ.**

ಮಲ್ಲಯ್ಯ, ರಾಮಣ್ಣ, ಈರಣ್ಣ, ತಿಮ್ಮಣ್ಣ, ಸಿದ್ದಪ್ಪ, ರಂಗಸ್ವಾಮಿ, ಕಾಳಿಂಗಪ್ಪ, ಮೂಗಣ್ಣ, ರಾಜಣ್ಣ, ಪಾತಲಿಂಗಪ್ಪ, ಮೂಡಲಗಿರಿಯಪ್ಪ, ಸಿದ್ದಪ್ಪ ಈ ಕಲಾವಿದರು ಶ್ರೀ ಕೃಷ್ಣ, ಕೊಳಾಳ್ ಕೆಂಚಾವಧೂತರ ಕುರಿತ ಭಜನೆ ಗೀತೆಗಳನ್ನು ಹಾಡುತ್ತಾರೆ. ವಿಶೇಷವಾಗಿ ಮಲ್ಲಯ್ಯನವರು ಕೊಳಾಳ್ ಕೆಂಚಾವಧೂತರ ಕುರಿತ ಜನಪದ ಗೀತೆಗಳು ಹಾಗೂ ತತ್ವಪದ ಕುರಿತ ಕ್ಯಾಸೆಟ್ ಬಿಡುಗಡೆ ಮಾಡಿದ್ದಾರೆ.

**ಶ್ರೀ ಪಾಂಡುರಂಗ ಭಜನಾ ಮಂಡಳಿ, ಕಂದಿಕೆರೆ,**

ಕಂಬಜ್ಜ, ಮೂಡ್ಲಪ್ಪ, ಕುಂಶಪ್ಪ, ಈರಣ್ಣ, ರಾಜಪ್ಪ, ಸಿದ್ದಪ್ಪ, ಜಯಮ್ಮ, ಶಾರದಮ್ಮ, ಮಹಾಲಿಂಗಪ್ಪ, ಮಂಜುನಾಥ, ಬಸವರಾಜು ಈ ತಂಡದವರು ವಿಶೇಷವಾಗಿ ಪ್ರತಿ ಶನಿವಾರ ಭಜನಾ ಗೀತೆಗಳನ್ನು ಹಾಡುತ್ತಾರೆ.

**ಶ್ರೀ ಪಾಂಡುರಂಗ ಭಜನಾ ಮಂಡಳಿ, ದೊಡ್ಡಘಟ್ಟ ಗೊಲ್ಲರಹಟ್ಟಿ**

ನಿಜಲಿಂಗಪ್ಪ, ರವಿ, ರಂಗನಾಥ್, ರಂಗಸ್ವಾಮಿ, ಪ್ರಕಾಶ್, ಪಾತಲಿಂತಪ್ಪ, ಗೋಪಿ, ರಾಮಚಂದ್ರಪ್ಪ, ಈ ಕಲಾವಿದರು ಭಜನಾ ಗೀತೆಗಳನ್ನು ಹಾಡುವ ಮೂಲಕ ಕಲೆಗೆ ತನ್ನದೇ ಆದ ಕೊಡುಗೆ ನೀಡಿದ್ದಾರೆ.

**ಶ್ರೀ ಕೃಷ್ಣ ಭಜನಾ ಮಂಡಳಿ, ಯರಬಳ್ಳಿ ದೊಡ್ಡ ಗೊಲ್ಲರಹಟ್ಟಿ.**

ಜೆ.ನಿಜಲಿಂಗಪ್ಪ, ನಿಜಲಿಂಗಪ್ಪ ಪೂಜಾರ್, ಈರಣ್ಣ, ಮಂಜುನಾಥ್, ಗಾದ್ರಪ್ಪ, ಜಯಣ್ಣ, ಜಯಮ್ಮ, ವಿನೋದಮ್ಮ, ಈ ಕಲಾವಿದರು ಯರಬಳ್ಳಿ ಮಾರಮ್ಮ, ಕಳವಿಭಾಗಿ ಶ್ರೀ ರಂಗನಾಥಸ್ವಾಮಿ, ಹಾಗೂ ರಂಗಾವಧೂತರ ಕುರಿತ ಭಜನಾ ಗೀತೆಗಳನ್ನು ಹಾಡುತ್ತಾ ಬಂದಿದ್ದಾರೆ.

**ಶ್ರೀ ಗೋಪಾಲಕೃಷ್ಣ ಸ್ವಾಮಿ ಭಜನಾ ಮಂಡಳಿ, ಹುಲಿತೊಟ್ಟಿಲು ದೇವರಹಟ್ಟಿ.**

ಗೋಪಾಲಪ್ಪ, ದೊಡ್ಡಯ್ಯ, ಸಣ್ಣ ತಿಮ್ಮಯ್ಯ, ಪೂಜಾರ್ ತಿಮ್ಮಣ್ಣ, ರಾಜಪ್ಪ, ಏಕಾಂತಪ್ಪ, ಸಣ್ಣನಾಗಪ್ಪ, ಈ ಕಲಾವಿದರು ಕಳೆದ 20 ವರ್ಷಗಳಿಂದ ಭಜನಾ ಪದಗಳನ್ನು ಹಾಡುತ್ತಾ ಬಂದಿದ್ದಾರೆ.

**ಯರ‍್ರಪ್ಪ ಸ್ವಾಮಿ ಭಜನಾ ಮಂಡಳಿ, ಮದ್ದನಕುಂಟೆ.**

ದಾಸಪ್ಪ, ದಿವಾಕರ್, ರಾಮಣ್ಣ, ವೀರಕರಿಯಣ್ಣ, ಸಿದ್ದೇಶ್, ರಾಜಪ್ಪ, ರಂಗಣ್ಣ, ನಿಂಗಣ್ಣ

**ಶ್ರೀ ಸಿದ್ದೇಶ್ವರ ಭಜನಾ ಮಂಡಳಿ ವದ್ದೀಕೆರೆ.**

ರಂಗಜ್ಜ, ಬಸವರಾಜಪ್ಪ, ಗಂಗಾಧರಪ್ಪ, ಮನೋಜ್, ರಂಗಪ್ಪ, ಸಿದ್ದಪ್ಪ, ಚಿಕ್ಕಣ್ಣ, ರತ್ನಮ್ಮ, ಆನಂದಪ್ಪ, ಗಿರೀಶ್, ಗಂಗಣ್ಣ, ಈ ಕಲಾವಿದರು ವದ್ದಿಕೆರೆಯ ಸಿದ್ದಪ್ಪ ಮತ್ತು ಯರಗಂಬಳ್ಳಿ ಮಾರಕ್ಕ ಕುರಿತು ಭಜನಾ ಪದಗಳನ್ನು 20 ವರ್ಷಗಳಿಂದ ಹಾಡುತ್ತಾ ಬಂದಿದ್ದಾರೆ.

**ಶ್ರೀ ವೆಂಕಟೇಶ್ವರ ಭಜನಾ ಮಂಡಳಿ ಕಲ್ಲಹಟ್ಟಿ.**

ತಿಮ್ಮಣ್ಣ, ನಾಗರಾಜ್, ಪಾತಲಿಂಗಪ್ಪ, ತಿಪ್ಪೇಸ್ವಾಮಿ, ಶಿವಲಿಂಗಪ್ಪ, ಸಿದ್ದಪ್ಪ, ಚೆನ್ನಕೇಶವ, ದಾಸಪ್ಪ, ವೆಂಕಟಪ್ಪ, ನಿಂಗಪ್ಪ, ಪಾತಲಿಂಗಪ್ಪ, ಸಿದ್ದಪ್ಪ, ಮುಂತಾದ ಕಲಾವಿದರು ಭಜನಾ ಪದಗಳನ್ನು ಹಾಡುತ್ತಾ ಬಂದಿದ್ದಾರೆ.

**ಶ್ರೀ ಕೆಂಚಾವಧೂತ ಭಜನಾ ಮಂಡಳಿ, ಸಿ.ಎನ್.ಮಾಳಿಗೆ.**

ಓ.ವೆಂಕಟೇಶ್, ಮಂಜುನಾಥ್.ಪಿ., ಚಿದಾನಂದ್.ಓ., ರಮೇಶ್, ಆರ್.ಮಲ್ಲಿಕಾರ್ಜುನ, ಓ.ಹನುಮಂತಪ್ಪ, ಆರ್.ರುದ್ರಮುನಿ, ಮಹಾಲಿಂಗಪ್ಪ, ರಾಜಣ್ಣ, ಕರಿಯಪ್ಪ.ಡಿ., ಯಶೋಧರ.ವಿ., ಪ್ರಜ್ವಲ್, ಎಸ್.ಓ. ಗುರುಸಿದ್ದನಾಯಕ, ರುದ್ರಮುನಿ, ಟಿ.ಕರಿಯಪ್ಪ, ಈ ಕಲಾವಿದರು ಕೊಳಾಳ್ ಕೆಂಚಾವಧೂತರು, ಅಹೋಬಲ ಲಕ್ಷ್ಮಿನರಸಿಂಹ ಸ್ವಾಮಿ ಕುರಿತ ಭಜನಾ ಪದಗಳನ್ನು ಕಳೆದ 20 ವರ್ಷಗಳಿಂದ ಕಟ್ಟಿ ಹಾಡುತ್ತಾ ಬಂದಿದ್ದಾರೆ.

**ಶ್ರೀ ಯರಗುಂಟೇಶ್ವರ ಭಜನಾ ಮಂಡಳಿ, ಸಕ್ಕರ**

ರಂಗಣ್ಣ, ದಿ.ಕೋಡಪ್ಪ, ದಿ.ಸೂಗೂರಪ್ಪ, ಭೂತಜ್ಜರ ತಿಪ್ಪೇಸ್ವಾಮಿ, ದಿ.ಮಹಾಲಿಂಗಪ್ಪ, ಹುಚ್ಚಪ್ಪ, ಕೆಂಚಮ್ಮ, ಕಣುಮಕ್ಕ, ಕಮಲಮ್ಮ, ಗೋವಿಂದಮ್ಮ, ಕರಿಯಮ್ಮ, ತಿಪ್ಪಕ್ಕ, ಮಾರಕ್ಕ, ಗಲ್ಲೇರ ಲಕ್ಕಮ್ಮ, ಜಯಮ್ಮ, ಲಕ್ಕಮ್ಮ, ಭೂತಮ್ಮ, ಕಿಟ್ಟಪ್ಪ (ಕೃಷ್ಣಮೂರ್ತಿ) ರಾಮಣ್ಣ, ನೀಲಮ್ಮ, ಮುಕುಂದಪ್ಪ, ಸಣ್ಣಮ್ಮ, ಕೆಂಚಮ್ಮ, ನಾಗೇಂದ್ರಮ್ಮ ಇವರು ಕಳೆದ 30 ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತಾ ಬಂದಿದ್ದಾರೆ.

**ಶ್ರೀ ರಾಮಾಂಜನೇಯ ಭಜನಾ ಮಂಡಳಿ, ಹರಿಯಬ್ಬೆ.**

ಜಿ.ಡಿ.ತಿಮ್ಮಯ್ಯ, ಹೆಚ್.ಮಂಜುನಾಥ್, ಹನುಮಂತರಾಯ, ರಾಮಕೃಷ್ಣಪ್ಪ, ನಾರಾಯಣಪ್ಪ (ಬಜ್ಜಿ) ಆನಂದಪ್ಪ, ವೀರಣ್ಣ, ತಿಮ್ಮಾರೆಡ್ಡಿ, ಹೆಂಜಾರಪ್ಪ, ಕಣ್ಣಮ್ಮ, ಏಕಾಂತಪ್ಪ, ಪರಮೇಶ್ವರಪ್ಪ (ಭಟ್ಟರು) ಶ್ರೀಕಂಠಪ್ಪ, ಚಂದ್ರಪ್ಪ ಇವರು ಕಳೆದ 15 ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತಾ ಇದ್ದಾರೆ.

**ಶ್ರೀ ಸಿದ್ದೇಶ್ವರ ಭಜನಾ ಮಂಡಳಿ, ಬೇತೂರು.**

ಬಿ.ಎಸ್.ಗುರುಸಿದ್ದಪ್ಪ, ಸಾಕ್ಷಪ್ಪ, ಮೂರ್ತಪ್ಪ, ತಿಮ್ಮಣ್ಣ, ಸಣ್ಣಗುರುಸಿದ್ದಪ್ಪ, ಅನುಸೂಯಮ್ಮ, ರತ್ನಮ್ಮ, ರೂಪಮ್ಮ, ತಿಮ್ಮಣ್ಣ (ಕುಂಬಾರ) ಇವರು ಕಳೆದ 20 ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತಾ ಇದ್ದಾರೆ.

**ಶ್ರೀ ಅಂಬಾದೇವಿ ಭಜನಾ ಮಂಡಳಿ, ಸಾಲುಹುಣಸೆ.**

ಹನುಮಂತರಾಯ, ಕೆಂಚಪ್ಪ, ನಾಗೇಂದ್ರಪ್ಪ, ವನಜಾಕ್ಷಮ್ಮ, ಮುದ್ದಮ್ಮ, ಉಮಾದೇವಿ, ಜಯಮ್ಮ, ತಿಪ್ಪಮ್ಮ, ಲತಾ, ಶಾಂತವೀರಮ್ಮ, ಈ ಕಲಾವಿದರು ಕಳೆದ 10 ವರ್ಷಗಳಿಂದ ಭಜನಾ ಪದಗಳನ್ನು ಹಾಡುತ್ತಾ ಬಂದಿದ್ದಾರೆ.

**ಕನೇಶ್ವರಸ್ವಾಮಿ ಭಜನಾ ಮಂಡಳಿ, ಶಿವಗಂಗ.**

ತಿಪ್ಪೇಸ್ವಾಮಿ, ಕೆಂಚಣ್ಣ, ಪಾತೇಗೌಡ್ರು, ಓಂಕಾರಪ್ಪ, ಶಿನಪ್ಪಸ್ವಾಮಿ, ಕುಮಾರಿ, ಅನ್ನಪೂರ್ಣಮ್ಮ, ತಿಪ್ಪಮ್ಮ, ಪುಟ್ಟರಂಗಮ್ಮ, ಎಲ್ಲಮ್ಮ, ಈ ಕಲಾವಿದರು 15 ವರ್ಷಗಳಿಂದ ಭಜನಾ ಪದಗಳನ್ನು ಹಾಡುತ್ತಾ ಬಂದಿದ್ದಾರೆ.

**ನಿತ್ಯಾನಂದ ಮತ್ತು ಗಂಗಪ್ಪಸ್ವಾಮೀಜಿ ಭಜನಾ ಮಂಡಳಿ, ಸೂಗೂರು.**

ಎಸ್.ಕೆಂಚಪ್ಪ, ಹನುಮಕ್ಕ, ತಿಪ್ಪೀರಮ್ಮ, ಈರಮ್ಮ, ಲಕ್ಕಮ್ಮ, ದೇವರಾಜು, ಸಣ್ಣೀರಪ್ಪ, ಯಶೋಧರ, ವಿಜಯಮ್ಮ, ಕಲ್ಯಾಣಮ್ಮ, ದೇವರಾಜು, ಸಾಕಮ್ಮ, ಚಂದ್ರಪ್ಪ, ಹೆಚ್.ಜಿ.ಪರಮೇಶ್ವರಪ್ಪ, ಎನ್.ಎಫ್.ವೀರಣ್ಣ, ಕೆ.ಜೆ.ವಿಜಯಕುಮಾರ್, ಈ.ಸಿ. ಈರಣ್ಣ, ಹನುಮಕ್ಕ ಇನ್ನು ಮುಂತಾದ ಕಲಾವಿದರು ಇವರು ಕಳೆದ 15 ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತಾ ಇದ್ದಾರೆ.

**ಗವಿಶಾಂತವೀರ ಭಜನಾ ಮಂಡಳಿ, ಯಲ್ಲದಕೆರೆ.**

ರಾಮಪ್ಪಸ್ವಾಮಿ, ಶಾಂಕುಂತಲಮ್ಮ, ಚೆನ್ನಪ್ಪಸ್ವಾಮಿ, ರಂಗಮ್ಮ, ಪೆದ್ದಪ್ಪ, ನರಸಿಂಹಸ್ವಾಮಿ, ಕಣುಮಕ್ಕ, ಹನುಮಂತಪ್ಪ, ಶಿವಣ್ಣ, ಈರಪ್ಪ, ಮಾಳಮ್ಮ, ವೆಂಕಟೇಶಪ್ಪ, ರಾಮಚಂದ್ರಪ್ಪ, ಜೋಗಪ್ಪ, ಈಶ್ವರಪ್ಪ ಮಲ್ಲಮ್ಮ ಮುಂತಾದ ಕಲಾವಿದರು ಕಳೆದ 15 ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತಾ ಇದ್ದಾರೆ.

**ಶ್ರೀ ಪಾಂಡುರಂಗಸ್ವಾಮಿ ಭಜನಾ ಮಂಡಳಿ, ಅಂಬಲಗೆರೆ.**

ಕೆಂಚಯ್ಯ, ವೆಂಕಟರಾಮಪ್ಪ, ರಂಗಸ್ವಾಮಿ, ರುದ್ರಮ್ಮ, ಶಾರದಮ್ಮ, ವಿಜಯಮ್ಮ, ರಂಗಸ್ವಾಮಿ, ಕರಿಸ್ವಾಮಿ.ಎಸ್., ಈರಣ್ಣ.ಓ., ಹೆಚ್.ಈರಣ್ಣ, ರಂಗನಾಥ್, ಮಾರಕ್ಕ, ತಿಪ್ಪಮ್ಮ ಇವರು ಕಳೆದ 15 ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತಾ ಇದ್ದಾರೆ.

**ಶ್ರೀ ಅಂಬಾದೇವಿ ಭಜನಾ ಮಂಡಳಿ, ರಂಗೇನಹಳ್ಳಿ.**

ಗಿರಿಸ್ವಾಮಿ.ಆರ್.ಜಿ., ಚಂದ್ರಶೇಖರ.ಜಿ.ಟಿ., ಶಾಂತಮೂರ್ತಿ, ನಾಗೇಂದ್ರಪ್ಪ, ರಂಗನಾಥ.ಆರ್.ಟಿ., ರಾಜಣ್ಣ, ಗಿರಿಜಮ್ಮ, ನಿಂಗಮ್ಮ, ಕೆಂಚಮ್ಮ, ರಂಗಮ್ಮ, ರವಿ ಮುಂತಾದ ಕಲಾವಿದರು ಕಳೆದ 15 ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತಾ ಇದ್ದಾರೆ.

**ಓಂ ಶ್ರೀ ಸಚ್ಚಿದಾನಂದ ಭಜನಾ ಮಂಡಳಿ, ಮಾರೇನಹಳ್ಳಿ**

ಜಿ.ರಂಗನಾಥ್, ಎಂ.ಟಿ.ಭೂತರಾಯ, ಕೋದಂಡ ರಾಮಯ್ಯ, ಶಿವಲಿಂಗಯ್ಯ, ರಂಗಸ್ವಾಮಿ. ತಿಪ್ಪೇಸ್ವಾಮಿ, ಕರಿಯಣ್ಣ, ಭಾಗ್ಯಮ್ಮ, ಕರಿಯಣ್ಣ, ಶಶಿಧರ ಮುಂತಾದ ಕಲಾವಿದರು ಕಳೆದ 15 ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತಾ ಇದ್ದಾರೆ.

**ನರಹರಿ ಭಜನಾ ಮಂಡಳಿ, ಹಿಂಡಸಕಟ್ಟೆ.**

ನಾಗರಾಜು, ರಂಗಮ್ಮ, ಈರಣ್ಣ, ಪಾಂಡುರಂಗಯ್ಯ, ಸುನಂದಮ್ಮ, ಸಾಕಮ್ಮ, ಉಮಾಪತಿ, ರುದ್ರಮ್ಮ, ಎಸ್.ರಂಗಯ್ಯ, ರಾಮಪ್ಪ.ಕೆ. ಮುಂತಾದ ಕಲಾವಿದರು ಕಳೆದ 15 ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತಾ ಇದ್ದಾರೆ.

**ಶ್ರೀ ಪಾಂಡುರಂಗ ಭಜನಾ ಮಂಡಳಿ, ವಸಂತನಗರ.**

ದಾಸಪ್ಪ, ಗೋವಿಂದಪ್ಪ, ಗೋವಿಂದರೆಡ್ಡಿ, ಯಲ್ಲಪ್ಪ, ಭೀಮಪ್ಪ, ಈರಣ್ಣ, ಲಕ್ಷ್ಮಮ್ಮ, ಪುಟ್ಟಮ್ಮ,

ರತ್ನಮ್ಮ, ಶಾರದಮ್ಮ ಮುಂತಾದ ಕಲಾವಿದರು ಕಳೆದ 10 ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತಾ ಇದ್ದಾರೆ.

**ಶ್ರೀ ಅಂಬಾದೇವಿ ಭಜನಾ ಮಂಡಳಿ, ಕಣಜನಹಳ್ಳಿ.**

ಕೆ.ಕೆಂಚರಾಯ, ಕೆ.ಎನ್.ಕದುರಪತಿ, ಶಿವಣ್ಣ, ಬಸವರಾಜಪ್ಪ, ಓಬಳಮ್ಮ, ವೆಂಕಟರಮಣ, ಸರೋಜಮ್ಮ, ತಿಪ್ಪಮ್ಮ, ಪಿ.ಕೆ.ಶ್ರೀನಿವಾಸ, ತಿಪ್ಪೇರುದ್ರಪ್ಪ, ತಿಪ್ಪೇಸ್ವಾಮಿ, ಶಿವಣ್ಣ, ರತ್ನಮ್ಮ ಮುಂತಾದ ಕಲಾವಿದರು ಕಳೆದ 10 ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತಾ ಇದ್ದಾರೆ.

**ವೀರಬ್ರಹ್ಮೇಂದ್ರಸ್ವಾಮಿ ಭಜನಾ ಮಂಡಳಿ, ಆಲೂರು.**

ರಂಗನಾಥಪ್ಪ, ನಂದೀಶ, ರಾಕೇಶ್, ಸಿದ್ದೇಶ್, ಪ್ರವೀಣ್, ಶಿವಕುಮಾರ್, ರತೀಶ್, ಬಸವರಾಜ್ ಮುಂತಾದ ಕಲಾವಿದರು ಕಳೆದ 10 ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತಾ ಇದ್ದಾರೆ.

**ಅಂಬಾದೇವಿ ಭಜನಾ ಮಂಡಳಿ, ಯರಬಳ್ಳಿ ಗೊಲ್ಲಹಳ್ಳಿ.**

ಆರ್.ಕರಿಯಪ್ಪ, ಲಲಿತಮ್ಮ, ಕೆಂಚಪ್ಪ, ಗಿರಿಜಮ್ಮ, ಪುಟ್ಟೀರಮ್ಮ, ಉಮಾದೇವಿ, ತಿಪ್ಪೇಸ್ವಾಮಿ, ರಾಜಣ್ಣ, ರಂಗಪ್ಪ, ರತ್ನಮ್ಮ, ತಿಮ್ಮಣ್ಣ, ವಿ.ಹನುಮಂತರಾಯ, ಕೆಂಚರಾಯ, ಕರಿಯಮ್ಮ ಮುಂತಾದ ಕಲಾವಿದರು ಕಳೆದ 10 ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತಾ ಇದ್ದಾರೆ.

**ಶ್ರೀ ಅಂಬಾದೇವಿ ಭಜನಾ ಮಂಡಳಿ, ಶಿಡ್ಲಯ್ಯನಕೋಟೆ.**

ಶಿವಣ್ಣ, ರಾಜಪ್ಪ, ತಿಪ್ಪೇರುದ್ರಪ್ಪ, ಪಾರ್ವತಮ್ಮ, ಭದ್ರಕ್ಕ, ರೇಣುಕಮ್ಮ, ಗೌಡಪ್ಪ, ಹನುಮಂತಪ್ಪ, ಲಕ್ಷ್ಮಕ್ಕ, ನಿಜಲಿಂಗಪ್ಪ, ಪರಮೇಶ್ವರಪ್ಪ ಮುಂತಾದ ಕಲಾವಿದರು ಕಳೆದ 15 ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತಾ ಇದ್ದಾರೆ.

**ಉಪಸಂಹಾರ**

ಹಿರಿಯೂರಿನ ಭಜನಾ ಕಲಾವಿದರು ವೃತ್ತಿಯಲ್ಲಿ ಬೇರೆ ಬೇರೆ ಕೆಲಸ ಮಾಡುತ್ತಾ, ಪ್ರವೃತ್ತಿಯಲ್ಲಿ ಕಲೆಗಾಗಿ ತಮ್ಮ ಜೀವನವನ್ನೇ ಅರ್ಪಣೆ ಮಾಡಿ ಕಲೆ, ಸಂಗೀತ, ಮತ್ತು ನಾಟಕ ಕ್ಷೇತ್ರದಲ್ಲಿ ಬಹಳಷ್ಟು ಕೊಡುಗೆ ನೀಡಿದ್ದಾರೆ, ಅವರ ಬದುಕು ಮತ್ತು ಸಾಧನೆ ಹಿರಿಯೂರಿನ ಕಲೆ ಸಾಹಿತ್ಯ, ಸಂಗೀತ, ಇತಿಹಾಸದಲ್ಲಿ ಹಾಗೆ ಉಳಿಯುತ್ತದೆ, ಅವರ ಆದರ್ಶ ಬದುಕು ಯುವ ಪೀಳಿಗೆಗೆ ಮಾದರಿಯಾಗಬೇಕಿದೆ ಹಾಗೂ ಯುವಜನತೆಯಲ್ಲಿ ಭಕ್ತಿಭಾವ, ರೀತಿ–ನೀತಿ, ಭಾವೈಕ್ಯತೆ, ಐಕ್ಯತೆ ಮೂಡಿಸುವಲ್ಲಿ ಭಜನಾ ಪದಗಳು ಪ್ರಧಾನವಾಗಿ ಕೆಲಸ ಮಾಡುತ್ತವೆ.

**ಪರಾಮರ್ಶನ ಗ್ರಂಥಗಳು**


- *ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ* – 2021–22.
- ಚಿಕ್ಕಣ್ಣ ಎಣ್ಣೆಕಟ್ಟೆ. (2008). *ಚಿತ್ರದುರ್ಗ ಜಿಲ್ಲೆಯ ಜನಪದ.* ಜನಪದ ಅಕಾಡೆಮಿ.
- ಸಣ್ಣ ಬಾಳಪ್ಪ ಹೊಸಮನಿ. (1979). *ಐಸಿರಿಯ ಹಿರಿಯೂರು.* ಚೇತನ ಪ್ರಕಾಶನ.
- ತಿಪ್ಪೇಸ್ವಾಮಿ, ಪಿ.ಆರ್. (1966). *ಕಲಾವಿದನ ನೆನಪುಗಳು.* ಉದಯರವಿ ಪ್ರಿಂಟರ್ಸ್


**ವಕ್ತೃಗಳ ವಿವರ**

- ***ಧನಂಜಯಕುಮಾರ್,ಜಿ.,*** *ಖ್ಯಾತ ರಂಗಭೂಮಿ ಕಲಾವಿದರು ಹಾಗೂ ಸಂಸ್ಕೃತಿ ಚಿಂತಕರು.* ಹಿರಿಯೂರು.
- ***ಗಡಾರಿ ಕೃಷ್ಣಪ್ಪ.,*** *ರಂಗಕರ್ಮಿಗಳು.* ರಂಗೇನಹಳ್ಳಿ
- ***ಕಾಶ್ಯಾಮಯ್ಯ.,*** *ರಾಜಕೀಯ ಚಿಂತಕರು ಹಾಗೂ ರಂಗಕರ್ಮಿಗಳು.* ಹಿರಿಯೂರು.
- ***ಮಂಜುನಾಥ ಮಾಳಿಗೆ.,*** *ಸಮಾಜ ಸೇವಕರು.* ಹಿರಿಯೂರು.

- ***ನಿಜಲಿಂಗಪ್ಪ, ಜೆ.,*** *ಮುಖ್ಯ ಶಿಕ್ಷಕರು ಹಾಗೂ ಭಜನಾ ಕಲಾವಿದರು.* ಯರಬಳ್ಳಿ, ಹಿರಿಯೂರು ತಾಲೂಕು.
- ***ರಾಘವೇಂದ್ರ, ಎ.,*** *ಸಮಾಜ ಸೇವಕರು ಹಾಗೂ ಮಾಲೀಕರು ರಾಘವೇಂದ್ರ ಪ್ರಿಂಟಿಂಗ್ ಪ್ರೆಸ್.* ಹಿರಿಯೂರು.
- ***ರಾಘವೇಂದ್ರ ಶ್ರೇಷ್ಠಿ,*** *ಕಲಾವಿದರು.* ದುರ್ಗಿಗುಡಿ ಬೀದಿ, ಫ್ಲೋರ್ ಮಿಲ್, ಹಿರಿಯೂರು.
- ***ರಾಘವೇಂದ್ರ,*** ಎಂ.ಎಸ್. *ಸಮಾಜ ಸೇವಕರು,* ಹಿರಿಯೂರು.
- ***ತಿಮ್ಮಯ್ಯ, ಜಿ.ಡಿ.,*** ಖ್ಯಾತ ರಂಗಕರ್ಮಿ, ಹರಿಯಬ್ಬೆ
- ***ತಿಮ್ಮಣ್ಣ.,*** *ನಿವೃತ್ತ ಶಿಕ್ಷಕರು ಹಾಗೂ ಭಜನಾ ಕಲಾವಿದರು.*